International Journal of Kannada Research
www.kannadajournal.com

ISSN: 2454–5813
IJKR 2019; 5(1): 109-113
© 2019 IJKR
www.kannadajournal.com
Received: 26-11-2018
Accepted: 30-12-2018

**ಡಾ. ತಾರಾಮಣಿ ಆರ್**
ಸಹ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ. ಆರ್.ಪುರ, ಬೆಂಗಳೂರು, ಕರ್ನಾಟಕ, ಭಾರತ

**Correspondence**
**ಡಾ. ತಾರಾಮಣಿ ಆರ್**
ಸಹ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ. ಆರ್.ಪುರ, ಬೆಂಗಳೂರು, ಕರ್ನಾಟಕ, ಭಾರತ

# ಕಂಬಾರರ ಶಿವರಾತ್ರಿ ನಾಟಕ: ಒಂದು ವಿವೇಚನೆ

**ಡಾ. ತಾರಾಮಣಿ ಆರ್**

**DOI:** https://doi.org/10.22271/24545813.2019.v5.i1b.1018

12ನೇ ಶತಮಾನದ ಕಲ್ಯಾಣದ ಕ್ರಾಂತಿಗೆ ಸಾಕ್ಷಿಯಾದ ಅನೇಕ ಬರಹಗಳಲ್ಲಿ ಕಂಬಾರರ ಶಿವರಾತ್ರಿ ನಾಟಕವೂ ಒಂದು. ಈ ನಾಟಕವು ಬಸವ ಮತ್ತು ಬಿಜ್ಜಳರ ಅಂತಿಮ ದಿನವನ್ನು ಆಧರಿಸಿ ರಚನೆಗೊಂಡ ನಾಟಕ. ಬಸವಣ್ಣ ರಚಿಸಿದ ಮಹಾಮನೆ ಸಮಾನ್ಯ ಜನವರ್ಗವನ್ನು ರಕ್ಷಿಸುವ ಕೇಂದ್ರವಾಗಿದೆ. ಮಹಾಮನೆಯಿಂದ ಪ್ರೇರಣೆಗೊಂಡ ಸಾಮಾನ್ಯ ವರ್ಗ ಕಾಯಕ ತತ್ವದ ಮೂಲಕ ತಮ್ಮ ಜೀವನವನ್ನು ಕಟ್ಟಿಕೊಂಡಿದ್ದಾರೆ. ಅವರ ಜೀವನ ಕ್ರಮ ನಾಟಕದಲ್ಲಿ ಪರ್ಯಾಯ ಶಕ್ತಿಯಾಗಿ ಕಾಣಿಸಿಕೊಳ್ಳುತ್ತದೆ.

**ಅ) ಸಾಮಾನ್ಯ ವರ್ಗದ ಜನರ ಕಣ್ಣಿನಿಂದ ವಚನ ಚಳುವಳಿಯನ್ನು ನೋಡುವ ಕ್ರಮ**

ನಾಟಕ ನಡೆಯುವುದು ಅರಮನೆಯ ಆವರಣದಲ್ಲಲ್ಲ ಬದಲಿಗೆ ಕಲ್ಯಾಣದ ದಲಿತ ಕೇರಿ ಮತ್ತು ಸೂಳೆ ಸಂಕವ್ವನ ಮನೆಯ ಸುತ್ತಲೇ. ಹಾಗಾಗಿ ಕಲ್ಯಾಣದ ಜನರ ಜೀವನದಲ್ಲಿ ವಚನ ಚಳುವಳಿಯ ಪ್ರಾಭಲ್ಯ ಹೇಗೆ ಗಾಢವಾಗಿ ಬೀರಿತ್ತು ಎಂಬುದನ್ನು ನಾಟಕಕಾರರು ಈ ಮೂಲಕ ತಿಳಿಸುವ ಪ್ರಯತ್ನ ಮಾಡುತ್ತಾರೆ. ದೃಶ್ಯ ಒಂದರಲ್ಲಿ ಕಲ್ಯಾಣದ ಹೊಲಗೇರಿಯಲ್ಲಿರುವ ಕಾಶವ್ವ, ಮುದುಕಪ್ಪ, ತುಂಗವ್ವ, ಕಲ್ಲಪ್ಪ ಇವರ ಸಂಭಾಷಣೆಯ ಮೂಲಕ ನಾಟಕ ಪ್ರಾರಂಭವಾಗುತ್ತದೆ. ಕಲ್ಯಾಣದಲ್ಲಿ ನಡೆಯುತ್ತಿರುವ ಅಕಾರ್ಯಗಳ ಬಗೆಗೆ ಚರ್ಚಿಸುತ್ತಾ, ವರ್ಣಸಂಕರ ವಿವಾಹ ಕೈಗೊಂಡ ಹರಳಯ್ಯ ಮತ್ತು ಮಧುವಸರ ಸಾವಿಗೆ ಆಕ್ರೋಶಗೊಂಡ ಕಾಶವ್ವ ಬಿಜ್ಜಳನಿಗೆ "ನನಹಾಟ್ಯಾ ಬಿಜ್ಜಳ ರಾಜಾ.......ದಿಕ್ಕಿಲ್ಲಧಾಂಗ ಸಾಯುವ ನೋಡ!" ಎಂದು ಶಪಿಸುತ್ತಾಳೆ. ರಾಜ ಬಿಜ್ಜಳನ ಬಗೆಗೆ ಸಾಮನ್ಯರಲ್ಲಿ ಯಾವುದೇ ಗೌರವ ಭಾವನೆಗಳು ಉಳಿದಿಲ್ಲದಿರುವುದು ಇದರಿಂದ ಗೋಚರವಾಗುತ್ತದೆ. ಬಸವಣ್ಣನ ಕಾಯಕ ತತ್ವವನ್ನು ಜೀವನದಲ್ಲಿ ರೂಢಿಸಿಕೊಂಡು ಬದುಕುತ್ತಿರುವ ಇಲ್ಲಿನ ಸಾಮಾನ್ಯ ಜನ ಬಸವಣ್ಣನ ತತ್ವಗಳಿಗೆ ಬದ್ಧವಾಗಿದ್ದರೂ ಅವುಗಳನ್ನು ಪೂರ್ಣವಾಗಿ ಅರಿತವರು ಎಂಬುದಾಗಿ ತಿಳಿಯಲಾಗದುದು ಅವರ ಮಾತುಗಳಲ್ಲಿಯೇ ವ್ಯಕ್ತವಾಗುತ್ತದೆ. ಆಕಾಶದಲ್ಲಿನ ಚುಕ್ಕಿಗಳನ್ನು ಹರಳಯ್ಯ ಮತ್ತು ಮಧುವರಸರ ಆತ್ಮವೆಂದು ತಿಳಿದು ತಮಗೂ ಅಂತ ಒಂದು ಆತ್ಮ ಇದ್ದಿದ್ದರೆ ಸತ್ತಮೇಲೆ ಅವೂ ಹೀಗೆ ಕುಣಿಯುತ್ತಾ ಸಾಗುತ್ತಿತ್ತು ಎಂದು ಮುಗ್ದವಾಗಿ ಮಾತಾಡುವ ಕಲ್ಲಪ್ಪ ಮತ್ತು ಸಂಗಡಿಗರಿಗೆ ಆತ್ಮ ಮತ್ತು ಪರಮಾತ್ಮ ಇವುಗಳ ಬಗೆಗೆ ಅರಿವಿಲ್ಲದಿರುವುದು ಗೋಚರವಾಗುತ್ತದೆ. ಸಾಮಾಜದ ಸಾಮಾನ್ಯ ಜನ ವರ್ಗವನ್ನು ಪ್ರತಿನಿಧಿಸುವ ಇವರಿಗೆ ಬಸವಣ್ಣನ ಆತ್ಮಲಿಂಗದ ಮತ್ತು ಇಷ್ಟಲಿಂಗದ ಪರಿಕಲ್ಪನೆಯಾಗಲಿ ಅದರ ಸಾಂಕೇತಿಕತೆಯಾಗಲಿ ತಿಳಿದಿಲ್ಲ. ಆದರೆ ಬಸವಣ್ಣನ ಕಾಯಕ ಧರ್ಮದ ಅರಿವಿದೆ, ಅವನ 'ಕಲಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ....' ಎಂಬ ವಿಚಾರದ ಅರಿವಿದೆ. ಹರಿಹರ ಭಟ್ಟನ ಮಗ ದಾಮೋದರ ಅರಮನೆಯಿಂದ ಕದ್ದು ತಂದ ಚಂದ್ರಸರವನ್ನು ಕಾಶವ್ವೆಯ ಮನೆಯಲ್ಲಿ ಬಚ್ಚಿಡುತ್ತಾನೆ. ಆ ಸರ ಕಾಶವ್ವೆ ಮತ್ತು ಮುದುಕಪ್ಪ ಇವರಲ್ಲಿ ಆಸೆಯನ್ನು ಮೂಡಿಸದೆ ಸತ್ತ ಹೆಗ್ಗಣದ ನಾತದಂತೆ ಭಾಸವಾಗುತ್ತದೆ. ಅದನ್ನು ಅವರು ದಾಮೋದರನಿಗೆ ಹಿಂತಿರುಗಿಸುತ್ತ ಹೇಳುವ ಮಾತು ಅವರ ಕಾಯಕ ತತ್ವದ ಸಂಕೇತವಾಗಿದೆ. "ನಮಗ ಅದು ಬ್ಯಾಡ. ನಾವದನ್ನೇನೂ ಕಾಯಕ ಮಾಡಿ ಗಳಿಸಿಲ್ಲ." ಎಂದು ಬೆಲೆಬಾಳುವ ಸರವನ್ನು ತಿರಸ್ಕಾರದಿಂದ ಕಾಣುತ್ತಾರೆ. ಇದೇ ಸರದ ಹಾರವನ್ನು ಸಂಗಯ್ಯ ಸೂಳೆ ಸಾವಂತ್ರಿಗೆ ನೀಡಿ ತನ್ನ ಶಿವ ಪೂಜಾ ಕಾರ್ಯಕ್ಕೆ ಕಾಮಾಕ್ಷಿ ಬೇಕೆಂದು ಕೇಳುತ್ತಾನೆ. ಕಾಮಾಕ್ಷಿಯೂ 'ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು, ನನಗದು ಬೇಡ' ಎಂದು ತನ್ನ ಆತ್ಮ ಸಂತೋಷಕ್ಕಾಗಿ ಸಂಗಯ್ಯನ

ಸೇವೆ ಮಾಡುವುದಾಗಿ ಸರವನ್ನು ನಿರಾಕರಿಸುತ್ತಾಳೆ. ಸಾವಂತ್ರಿಯೂ ಆ ಸರವನ್ನು ಕೊತವಾಲನಿಗೆ ಕೊಡಲು ಪಾದರಕ್ಷೆ ಇಡುವ ಜಾಗದಲಿ ಇಡುತ್ತಾಳೆ. ಆ ಸರದ ಮೌಲ್ಯ ಎಷ್ಟೇ ಇದ್ದರೂ ತಮ್ಮ ಕಾಯಕವನ್ನು ನೆಚ್ಚಿ ಜೀವಿಸುತ್ತಿರುವ ಸಾಮಾನ್ಯ ವರ್ಗಕ್ಕೆ ಆ ಚಿನ್ನದ ಸರ ಒಂದು ತೃಣ ಸಮಾನವಾಗುತ್ತದೆ. ಮತ್ತು ಅವರ ಕಾಯಕ ನಿಷ್ಠೆಯನ್ನು ಚಿನ್ನದ ಸರದ ಮೌಲ್ಯವೂ ಸಡಿಲಿಸದೇ ಹೋದುದನ್ನು ಕಾಣುತ್ತೇವೆ.

ತನ್ನ ಕಾಯಕದ ಮೇಲೆ ಅಪಾರ ಅಭಿಮಾನವನ್ನು ಹೊಂದಿರುವ ಈ ನಾಟಕದ ಮತ್ತೊಂದು ಪಾತ್ರ ಸೂಳೆ ಸಾವಂತ್ರಿ. ಸಂಗಯ್ಯನ ಅಪೇಕ್ಷೆಯಂತೆ ಕಾಮಾಕ್ಷಿ ಅವನ ಸೇವೆಯಲ್ಲಿ ತೊಡಗಿರುವಾಗ ಅಲ್ಲಿಗೆ ಬರುವ ಬಿಜ್ಜಳ ಕೋಪಗೊಂಡುದುದನ್ನು ಕಂಡು "ವಿಚಾರ ನಾರಿಯರಾದ ನಾವು ಸೇವೆ ಬಯಸಿ ಬಂದ ಎಲ್ಲರನ್ನೂ ಸಮಾನವಾಗಿ ಕಾಣುವುದು ನಮ್ಮ ವೃತ್ತಿಧರ್ಮ" ಎಂದು ತನ್ನ ಕಾಯಕ ಧರ್ಮವನ್ನು ಸಮರ್ಥಿಸಿಕೊಳ್ಳುತ್ತಾಳೆ. ಆಗ ಬಿಜ್ಜಳ ರಾಜ್ಯದಲ್ಲಿರುವ ಎಲ್ಲದರ ಮೇಲೂ ತನ್ನ ಅಧಿಕಾರವಿರುವುದರಿಂದ ಕಾಮಾಕ್ಷಿಯನ್ನು ಹೇಗಿದ್ದರೆ ಹಾಗೇ ತನಗೆ ತಂದೊಪ್ಪಿಸ ಬೇಕೆಂದು ಸಿಡುಕುತ್ತಾನೆ. ಆಗ ಸಾವಂತ್ರಿಯು– "ಸ್ವಚ್ಛಂದವಾಗಿ ದೇಹ ಮಾರುವುದಕ್ಕೆ ಬಂದವರಲ್ಲ ನಾವು, ನಮಗೂ ನಿಯಮಗಳಿವೆ ಸ್ವಾಮಿ. ಸಂದರ್ಭಾನುಸಾರ ಮುಖ ನೋಡಿ ಮಣೆ ಹಾಕುವ ನಿಯಮಗಳಲ್ಲ ಇವು. ಎಲ್ಲರಿಗೂ ಸಮಾನವಾದ ನಿಯಮಗಳು. ಸಂಗೀತದಲ್ಲಿ ಅಂತರ್ಗತ ನಿಯಮಗಳಿರುವಂತೆ ಸ್ತ್ರೀಯ ದೇಹದೊಳಗೂ ಇವೆ...,"

ಎಂದು ಹೇಳಿ ಸಂಗಯ್ಯನಿಗೆ ಒಪ್ಪಿಸಿದ್ದ ಕಾಮಾಕ್ಷಿಯನ್ನು ಬಿಜ್ಜಳನಿಗೆ ಒಪ್ಪಿಸಲು ನಿರಾಕರಿಸುತ್ತಾಳೆ. ತನ್ನ ಬಳಿಯಿರುವ ಸರವನ್ನು ಬಿಜ್ಜಳನಿಗೆ ಹಿಂದಿರುಗಿಸುತ್ತಾಳೆ. ಲಕ್ಷಾಂತರ ರೂಪಾಯಿ ಬೆಲೆಬಾಳುವ ಸರವೆಂದು ಬಿಜ್ಜಳ ಅವಳಿಗೆ ಸರದ ಆಮಿಷವನ್ನು ತೋರಿದಾಗ ಸಾವಂತ್ರಿಯು 'ನಮಗೆ ಬೇಡವಾದದ್ದು ಎಷ್ಟು ಲಕ್ಷ ಹಣವಾದರೇನು ಪ್ರಭು? ನಮ್ಮನ್ನು ಮೀರಿದ್ದು ನಮಗದು ಕಲ್ಲು!" ಎಂದು ನಿರಾಕರಿಸುತ್ತಾಳೆ. ಬಿಜ್ಜಳ ಸಾವಂತ್ರಿಯ ವೃತ್ತಿ ಧರ್ಮವನ್ನು ಕುರಿತು ಅಸಭ್ಯವಾಗಿ ಮಾತನಾಡಿದಾಗ ಕೋಪಗೊಂಡ ಸಾವಂತ್ರಿ "ಶ್ರೀಮಂತನೊಬ್ಬ ಕದ್ದ ಹಣದಿಂದ ಶ್ರೀಮಂತನಾದ ಬಗ್ಗೆ ಕೊಚ್ಚಿಕೊಂಬಾಗ, ಜನರನ್ನ ಕೊಂದು ರಾಜನಾದವನು, ತನ್ನ ವಿಜಯಗಳ ಬಗ್ಗೆ ಕೊಚ್ಚಿಕೊಂಬಾಗ............... ಕಾಯಕ ಅಂತ ಮೈಮಾರಿ ಪ್ರಾಮಾಣಿಕವಾಗಿ ಗಳಿಸಿದ ಹಣದಲ್ಲಿ ತೆರಿಗೆ ಕಟ್ಟುವ ನಾವು ಯಾಕೆ ನಾಚಿಕೊಳ್ಳಬೇಕು?............ತಾವು ರಾಜರು ಎಲ್ಲರೂ ಗೌರವಾನ್ವಿತವಾಗಿ ಬದುಕುವ ವ್ಯವಸ್ಥೆ ಮಾಡಬೇಕಿತ್ತು. ತಾವೇ ರಾತ್ರಿ ಇಲ್ಲಿಗೆ ವೇಷಾಂತರದಲ್ಲಿ ಬರುವಾಗ ನಮಗೆ ಬೋಧನೆ ಮಾಡುವುದು ಅಸಹಜವಲ್ಲವೆ ಪ್ರಭು? ಎಂದು ಉತ್ತರಿಸುತ್ತಾಳೆ. ಸಾವಂತ್ರಿಯ ಮಾತಿಗೆ ರಾಜನೇ ಆಘಾತಗೊಳ್ಳುತ್ತಾನೆ. ಹೀಗೆ ಸಮಾಜದ ದೃಷ್ಟಿಯಲ್ಲಿ ಸೂಳೆಯಾದರೂ, ಕೀಳಾಗಿ ಗುರುತಿಸಿಕೊಂಡರೂ ಅವಳ ಕಾಯಕ ನಿಷ್ಠೆಯಿಂದಾಗಿ ಸಾವಂತ್ರಿ ಶರಣತ್ವದ ಪ್ರತಿರೂಪವಾಗಿ ಕಂಡುಬರುತ್ತಾಳೆ. ಹಾಗಾಗಿ ಅವಳ ವ್ಯಕ್ತಿತ್ವಕ್ಕೆ ಬೆಲೆ ಮೂಡಿದೆ. "ಸಾವಿರಾರು ವರ್ಷಗಳಿಂದ ಇರುವ ಕಾನೂನು ಕಟ್ಟಲೆಗಳಿಂದ ಸ್ಥಾಪಿಸಲಾಗದ ಸುಖೀ ರಾಜ್ಯವನ್ನು ಬಸವಣ್ಣ ಕೇವಲ ಕೆಲವೇ ದಿನಗಳಲ್ಲಿ ಶರಣತತ್ವಗಳಿಂದ ಸುಖೀರಾಜ್ಯವನ್ನು ಸ್ಥಾಪಿಸಿದ" ಎಂಬ ಸಾವಂತ್ರಿಯ ಮಾತುಗಳಲ್ಲಿ ಬಸವಣ್ಣನ ಸಿದ್ಧಾಂತಗಳು ಜನಸಾಮಾನ್ಯರ ಮೇಲೆ ಬೀರಿದ್ದಿರಬಹುದಾದ ಪರಿಣಾಮದ ಚಿತ್ರಣವಿದೆ.

ದುಡಿದು ತಿನ್ನುವುದೇ ಮನುಷ್ಯನ ಮೂಲ ಕರ್ತವ್ಯವೆಂದು ಸಾರುವ ಮತ್ತೊಂದು ಪಾತ್ರ ಕಳ್ಳ ಚಿಕ್ಕಯ್ಯನ ಪಾತ್ರ. ಹೆಸರೇ ಸೂಚಿಸುವಂತೆ ಈತ ವೃತ್ತಿಯಲ್ಲಿ ಕಳ್ಳ ಅರ್ಥ ರಾಜ್ಯದ ಆಸೆಗೆ ಬಸವಣ್ಣನನ್ನು ಕೊಲ್ಲಲು ಕಾಶ್ಮೀರದಿಂದ ಬರುವ ಈತ ಬಸವಣ್ಣನಿಂದ ಪ್ರೇರಿತನಾಗಿ ಶರಣದೀಕ್ಷೆಯನ್ನು ಕೊಂಡು ಶರಣನಾಗಿ ಕಳ್ಳತನವನ್ನು ಬಿಟ್ಟು ಕಾಯಕದಿಂದ ತನ್ನ ಬದುಕನ್ನು ಪೊರೆಯುತ್ತಿರುವುದಾಗಿ ದಾಮೋದರ ಮತ್ತು ಅವನ ತಂದೆ ಹರಿಹರನಿಗೆ ತನ್ನ ಪೂರ್ವವೃತ್ತಾಂತವನ್ನು ಹೇಳುತ್ತಾನೆ. ಬಸವಣ್ಣನವರ ಕಾಯಕದ ಮಹತ್ವದ ಅರಿವು ತನಗಾದುದರ ಬಗೆಗೆ ಕಳ್ಳ ಚಿಕ್ಕಯ್ಯ ಹೇಳುವುದು ಹೀಗೆ–"..........ನಾ ಅವರನ್ನ ಕೊಲ್ಲೋದಿರಲಿ, ಅವರ‍್ಯ ನನ್ನೊಳಗಿನ ಕಳ್ಳನನ್ನ ಹಿಡಿದು ಕೊಂದ ಹಾಕಿದರು! ಅಂದ್ಯ ಶರಣಧರ್ಮ ದೀಕ್ಷಾ ತಗೊಂಡೆ. ಪೂರ್ವಾಶ್ರಮದ ನೆನಪಿರಲಿ ಅಂತ ಕಳ್ಳ ಚಿಕ್ಕಯ್ಯ ಅಂತ ಹೆಸರಿಟ್ಟುಕೊಂಡೇನಿ. "ಇನ್ನು ಮ್ಯಾಲೆ ಕಳ್ಳತನ ಮಾಡೋದಿಲ್ಲ" ಅಂತ ಆ ದಿನವೇ ಅಣ್ಣಾವರ ಪಾದದ ಆಣೆ ಇಟ್ಟುಕೊಂಡೆ. ಈಗೇನೂ ಇಲ್ಲ! ಕಾಯಕ ಮಾಡ್ತೀನಿ, ಊಟ ಮಾಡ್ತೀನಿ, ಉಳಿದದ್ದನ್ನ ಮಹಾಮನೆಗೆ ಕೊಡ್ತೀನಿ, ಹೆಚ್ಚ ಗಳಿಕೆ ಆದರ ತೆರಿಗೆ ಕಟ್ಟತೀನಿ."

ಹೀಗೆ ಕಳ್ಳನೂ ಶರಣ ಧರ್ಮವನ್ನು ಸ್ವೀಕರಿಸಿ ಶರಣನಾಗುತ್ತಾನೆ. ತನ್ನ ಕಾಯಕದ ಬಗೆಗೆ ಹೇಳುವ ಚಿಕ್ಕಣ್ಣನ ಮಾತಿನಿಂದ ದಾಮೋದರನ ವರ್ತನೆಯಲ್ಲೂ ಬದಲಾವಣೆ ತೋರುತ್ತದೆ. ಕೊನೆಗೆ ಆತ ತನ್ನ ಕಳ್ಳತನದ ಅಪರಾಧವನ್ನು ಮಹಾರಾಜರಿಗೆ ಹೇಳುವುದರ ಮೂಲಕ ಬಸವಣ್ಣನ ಕಾಯಕ ನಿಷ್ಠೆಯನ್ನು ರೂಢಿಸಿಕೊಳ್ಳುತ್ತಾನೆ. ಬಸವಣ್ಣನ ವಚನ ಚಳುವಳಿ ಇಂತಹ ಕೆಳವರ್ಗದ ಜನರ ಮನಸ್ಸನ್ನು ಆಳವಾಗಿ ಕಲಕಿರುವುದುದನ್ನು ಈ ಮೇಲಿನ ಪಾತ್ರಗಳ ಮೂಲಕ ತಿಳಿಯ ಬಹುದು.

**ಅರಮನೆ ಮತ್ತು ಮಹಾಮನೆಯ ನಡುವಿನ ಸಂಘರ್ಷ:**

ನಾಟಕದ ಕೇಂದ್ರ ಬಿಂದು ಅರಮನೆ ಮತ್ತು ಮಹಾಮನೆಯ ನಡುವಿನ ಸಂಘರ್ಷವೆ ಆಗಿದೆ. ಅರಮನೆ ಮತ್ತು ಮಹಾಮನೆ ಕಲ್ಯಾಣದಲ್ಲಿ ಭಿನ್ನ ಭಿನ್ನ ಆಶಯಗಳೊಂದಿಗೆ ರಚನೆಯಾಗಿರುವುದನ್ನು ನಾಟಕ ಧ್ವನಿಸುತ್ತದೆ. ನಾಟಕದ ಪ್ರಾರಂಭದಲ್ಲಿ ಸೂತ್ರಧಾರ ಹೇಳುವಂತೆ ಮಾಂಡಲೀಕನಾಗಿದ್ದ ಬಿಜ್ಜಳ ಚಾಲುಕ್ಯ ಸಾಮ್ರಾಜ್ಯವನ್ನು ಗೆದ್ದು ಮಂಗಳವೇಡೆಯಿಂದ ಕಲ್ಯಾಣಕ್ಕೆ ಬಂದು ತನ್ನ ಅಸ್ಥಿತ್ವವನ್ನು ಸ್ಥಾಪಿಸಿದಂತೆ, ಅವನ ಅಧಿಕಾರಿಯಾಗಿ ಬಂದ ಬಸವಣ್ಣ ಮರ್ತ್ಯಲೋಕ–ದೇವಲೋಕಗಳನ್ನು ಒಂದು ಮಾಡಲು ಚಿನ್ನದ ಅರಮನೆಯೆದುರು ಮಣ್ಣಿನ ಮಹಾಮನೆ ಕಟ್ಟಿದ. ಇಲ್ಲಿ ಚಿನ್ನ ಮನುಷ್ಯನ ದುರಾಸೆ, ಆಮಿಷಗಳ ಸಂಕೇತವಾಗಿ ಸುಳ್ಳು, ವಂಚನೆ, ಮೋಸ, ಚಾಡಿಕೋರತನದ ತಳಹದಿಯ ಮೇಲೆ ನಿಂತಿದೆ. ಬಿಜ್ಜಳನ ಈ ಚಿನ್ನದ ಅರಮನೆಯನ್ನು ಕಂಬಾರರು ಕನಕಪುರಿಯನ್ನಾಗಿ ಚಿತ್ರಿಸಿದ್ದಾರೆ. " ಕನಕಪುರ ಭೋಗಸಂಸ್ಕೃತಿಯ ಪ್ರತೀಕ. ಧಾನ್ಯವನ್ನು ಚಿನ್ನ ಮಾಡುವ, ಹುಲ್ಲಿನ ಎಸಳನ್ನು ಸೈನಿಕರಾಗಿ ರೂಪಾಂತರಿಸುವ ಕನಕಪುರಿಯಲ್ಲಿ ವಿನಾಶಕಾರಿ ಸಂಸ್ಕೃತಿಯಿದೆ. ಇಲ್ಲಿನ ಮಾನವ ಸಂಬಂಧ ಶಿಥಿಲಗೊಂಡು ಒಬ್ಬರನ್ನೊಬ್ಬರು 'ಬೇಟೆ'ಯಾಡುತ್ತ ಮೌಲ್ಯ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಆತ್ಮ ನಿಷೇಧವೇ ಇರದ ಉಪಭೋಗವಾದ ಹಾಗೂ ಪ್ರಕೃತಿಯ ಜೊತೆ ಶೋಷಣಾತ್ಮಕ ಸಂಬಂಧವುಳ್ಳ ಆಧುನಿಕತೆಯ ಪ್ರತಿನಿಧಿ"[1] ಈ ಚಿನ್ನದ ಅರಮನೆ ಆಗಿದೆ. ಇದಕ್ಕೆ ಪರ್ಯಾಯವಾಗಿರುವ ಮಣ್ಣು ಕಾಯಕ, ಕರುಣೆ, ಸಮಾನತೆಯ ಸಂಕೇತವಾಗಿ ಸತ್ಯ, ದಾಸೋಹ, ಬದಲಾವಣೆಯ ಬುನಾದಿಯ ಮೇಲೆ ನಿಲ್ಲುತ್ತದೆ. ಹಾಗಾಗಿ ಇಲ್ಲಿನ ಮಹಾಮನೆಯನ್ನು ಕಂಬಾರರು ಶಿವಾಪುರದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. "ಶಿವಾಪುರ ಕಂಬಾರರ ಸೃಜನಶೀಲತೆಯ ಕೇಂದ್ರ ರೂಪಕ. ಶಿವಾಪುರದ ಜನ ಮಣ್ಣಿನಲ್ಲಿ ಹುಟ್ಟಿ ಮರಗಳ ಜೊತೆ ಬೆಳೆದವರು. ಬೇಸಾಯವನ್ನು ನಂಬಿ ಬದುಕುವ ಮಂದಿ. ಕೆಲಸದ

ಬಗ್ಗೆ ಅದಮ್ಯ ಪ್ರೀತಿ ಇರುವ ಶ್ರಮಸಂಸ್ಕೃತಿಯ ಈ ಜನರು ತಮ್ಮ ಕೆಲಸ ಮುಗಿದು ಖಾಲಿ ಕೂರುವಂತಾದರೆ ಇನ್ನೊಬ್ಬರಿಗೆ ಸಹಾಯ ಮಾಡಿಯಾದರೂ ಕೆಲಸದಲ್ಲಿ ತೊಡಗಿಸಿಕೊಳ್ಳುವವರು. ಮಾತ್ರ ಸಂಸ್ಕೃತಿ ಇಲ್ಲಿ ಪ್ರಧಾನ. ಇಲ್ಲಿಯ ಪರಿಸರದಲ್ಲೇ ಪೋಷಿಸುವ, ಸಲಹುವ, ರಕ್ಷಿಸುವ ಗುಣವಿದೆ."[2] ಹಾಗಾಗಿಯೇ ಮಹಾಮನೆಯ ತೇಜಸ್ಸು ಅರಮನೆ ಹಾಗೂ ಅಲ್ಲಿನ ಸನಾತನಿಗಳ ಹೊಟ್ಟೆಯ ಕಿಚ್ಚಿಗೆ ಆಹುತಿಯಾಗುತ್ತದೆ. ಅದರ ಮೊದಲ ಹಂತವೇ ಹರಳಯ್ಯ ಮತ್ತು ಮಧುವರಸರು ನಡೆಸಿದ ವರ್ಣಸಂಕರ ವಿವಾಹ. ವರ್ಣಸಂಕರ ವಿವಾಹದಿಂದ ಕೋಪಗೊಂಡ ಪ್ರಭುತ್ವ ಮತ್ತು ಸನಾತನಿಗಳು ಹರಳಯ್ಯ ಮತ್ತು ಮಧುವರಸರನ್ನು ಅಮಾನವೀಯವಾಗಿ ಕೊಲ್ಲುತ್ತದೆ. ಮಹಾಮನೆಯ ಆವರಣದಲ್ಲಿ ಯಾವುದೇ ಜಾತಿ ಧರ್ಮದ ಹಂಗಿಲ್ಲದೆ ಮಾನವೀಯತೆ ಆಧಾರದ ಮೇಲೆ ಸಂಬಂಧ ಬೆಳೆಸಿದ್ದ ಹರಳಯ್ಯ ಮತ್ತು ಮಧುವರಸರು, ಅರಮನೆಯ ಕಣ್ಣಿಗೆ ಕಾಣುವುದು ಒಬ್ಬ ಹೊಲೆಯನಾಗಿ ಮತ್ತೊಬ್ಬ ಬ್ರಾಹ್ಮಣನಾಗಿ. ಪ್ರಾಸ್ತಾವನೆಯಲ್ಲಿ ನಟಿ ಹೇಳುವ ಮಾತು "ಶರಣನಿಗೆ ಜಾತಿಯಿಲ್ಲವೆಂದು ಮಹಾಮನೆ ಹೇಳಿದರೆ ಮನುಷ್ಯರೆಲ್ಲ ಯಾವುದೋ ಒಂದು ಜಾತಿಗೆ ಸೇರಿದವರಿರಲೇಬೇಕೆಂದು ಅರಮನೆ ಹೇಳಿತು. ಹರಳಯ್ಯ ಮಧುವರಸರ ಶರಣ ಸಂಬಂಧ ಬಸವಣ್ಣನಿಗೆ ಒಪ್ಪಿಗೆಯಾದರೂ ಬಿಜ್ಜಳನಿಗೆ ಆಗಲಿಲ್ಲ. ಬಸವಣ್ಣನ ಮಾತು ಮುತ್ತಿನಹಾರ. ಅಲ್ಲಮನ ಮಾತು ಜ್ಯೋತಿರ್ಲಿಂಗ. ಆದರೆ ಬಿಜ್ಜಳನ ಮಾತಿಗೆ ಹತ್ತು ಮನಸ್ಸು. ಹದಿನೆಂಟು ಬುದ್ಧಿ!"

ಹೀಗೆ ನಾಟಕದ ಪ್ರಸ್ತಾವನಾ ಭಾಗದಲ್ಲಿಯೇ ನಮಗೆ ನಾಟಕಕಾರರು ಅರಮನೆ ಮತ್ತು ಮಹಾಮನೆಯ ಸಂಘರ್ಷಕ್ಕೆ ಇರಬಹುದಾದ ಕಾರಣಗಳನ್ನು ಕಟ್ಟಿಕೊಡುತ್ತಾರೆ. ಬಸವಣ್ಣ ಕಟ್ಟಿದ ಮಹಾಮನೆಯನ್ನು 'ಅದು ಸದಾಕಾಲ ಹಸನಾಗಿರುವಂತೆ, ಅದರಲ್ಲಿ ಮನೆಯೊಡೆಯ ಸದಾಕಾಲ ಇರುವಂತೆ ನೋಡಿಕೊಂಡವನು' ಅಂದರೆ ಮಹಾಮನೆಯಲ್ಲಿ ಶರಣರು ಸದಾ ನೆಲೆಸಿದ್ದು, ಎಲ್ಲರ ಭಾವನೆಗಳಿಗೂ ಬೆಳೆಸಿಗುವಂತ ವಾತಾವರಣವನ್ನು ಕಟ್ಟಿದವನು ಬಸವಣ್ಣ. ಮಹಾಮನೆಯ ದೀಪ ಅಲ್ಲಿನ ಶರಣರ ಜ್ಞಾನದ ಸಂಕೇತವಾಗಿದ್ದು. ಮಹಾಮನೆಯ ವಾತಾವರಣದಲ್ಲಿ ಸಾಮಾನ್ಯರೂ ಜ್ಞಾನಿಗಳಾಗಿ ಹೊರ ಹೊಮ್ಮುತ್ತಿದ್ದರೆ, ಅರಮನೆಯಲ್ಲಿ ಚಾಡಿಕೋರರ ಹಾವಳಿ ಹೆಚ್ಚಾಗಿ ರಾಜ ಇದ್ದೂ ಇಲ್ಲದವನಂತ ಸ್ಥಿತಿ ಅವನದಾಗಿತ್ತು. ಸಂಗಯ್ಯನೊಂದಿಗೆ ಮಾತನಾಡುತ್ತಾ ಹುಚ್ಚಿ ಹೇಳುವ ಮಾತುಗಳಲ್ಲಿ ಅರಮನೆ ಮತ್ತು ಮಹಾಮನೆಗಳ ಪರಸ್ಪರ ವೈಪಲ್ಯದ ಕಾರಣಗಳವೆ. ಅರಮನೆ ಪಕ್ಕದಲ್ಲಿ ಮಹಾಮನೆಯನ್ನು ಬಸವಣ್ಣ ಕಟ್ಟಿದರೂ ಅವೆರಡರ ದಿಕ್ಕು ಬೇರೆ ಬೇರೆ, ಆಲೋಚನೆಗಳು ಬೇರೆ ಬೇರೆ. ಅರಮನೆಯಲ್ಲಿದ್ದವರಿಗೆ ಮಹಾಮನೆಯ ವಿಚಾರಗಳು ಚಿಂತನೆಗಳು ಅರ್ಥವಾಗಲಿಲ್ಲ ಹಾಗಾಗಿ ರಾಜನ ಸುತ್ತ ಚಾಡಿಕೋರರು ತುಂಬಿ ಅವನನ್ನು ಭ್ರಷ್ಟನನ್ನಾಗಿಸಿದರು. ಮಹಾಮನೆಗೆ ಶರಣರು ಬೇಕು, ಶರಣರು ಅಥವಾ ಮಹಾಮನೆಯ ಜನ ಅರಮನೆಯಲ್ಲಿರುವವರ ಬಗೆಗೆ ಚಿಂತಿಸಲಿಲ್ಲ ಹೀಗೆ ಎಲ್ಲರೂ ತಮ್ಮ ಕಾಯಕ ಧರ್ಮದಲ್ಲಿ ನಿರತರಾದರು. ಇದರಿಂದಾಗಿ ದೇಶದ ರಾಜಕಾರಣದಲ್ಲಿ ಕುತಂತ್ರಿಗಳೇ ತುಂಬಿಹೋದುದರಿಂದ ಶರಣರ ಮೇಲೆ ಹಲ್ಲೆಗಳು ಜರುಗುತ್ತಿವೆ. ನಗರ ದೇವತೆಯಾದ ತಾನೂ ಹುಚ್ಚಿಯಾಗಿ ಅಲೆಯ ಬೇಕಾದ ಪರಿಸ್ಥಿತಿ ಒದಗಿದೆ ಎಂದು ಅರಮನೆ ಮತ್ತು ಮಹಾಮನೆಯ ಜಟಾಪಟಿಯ ಮಧ್ಯದಲ್ಲಿ ಸಿಲುಕಿರುವವರನ್ನು ಕುರಿತು ತಿಳಿಸುತ್ತಾಳೆ.

ಅರಮನೆ ಮತ್ತು ಮಹಾಮನೆಯ ಸಂಘರ್ಷದ ತೀವ್ರತೆಯ ಅರಿವಾಗುವುದು ಸೂಳೆ ಸಾವಂತ್ರಿಯ ಮನೆಯಲ್ಲಿ. ರಾತ್ರಿ ವೇಷಧಾರಿಯಾಗಿ ಸಾವಂತ್ರಿಯ ಮನೆಗೆ ಬರುವ ಬಿಜ್ಜಳನಿಗೆ ಬಸವಣ್ಣ ತನಗೆ ರಾಜಕಾರ್ಯದಲ್ಲಿ ಮಾತ್ರ ಪ್ರತಿಸ್ಪರ್ಧಿಯೆನಿಸುವುದಿಲ್ಲ. ಅವನ ವೈಯಕ್ತಿಕ ವಿಚಾರದಲ್ಲಿಯೂ ತನಗೆ ಪ್ರತಿಸ್ಪರ್ಧಿಯೆಂದು ತೀರ್ಮಾನಿಸುತ್ತಾನೆ. ಈ ಸಂದರ್ಭದಲ್ಲಿ ಸಾವಂತ್ರಿ, ಬಿಜ್ಜಳ, ಬಸವಣ್ಣನ ಮಾತುಗಳಲ್ಲಿ ಅರಮನೆ ಮತ್ತು ಮಹಾಮನೆಯ ಸಂಘರ್ಷದ ಕಾರಣಗಳು ತೆರೆದುಕೊಳ್ಳುತ್ತಾ ಸಾಗುತ್ತದೆ. ಬಿಜ್ಜಳನಿಗೆ ಬಸವಣ್ಣ ಹಾಗೂ ಅವನ ಪ್ರಸಿದ್ಧತೆಗೆ ಕಾರಣವಾದ ಮಹಾಮನೆಯ ಮೇಲೆ ದ್ವೇಷವಿದೆ.

ಬಿಜ್ಜಳನಿಗೆ ಬಸವಣ್ಣ ಮೋಸದಿಂದ ದಲಿತರು, ಭಿಕ್ಷುಕರು, ಆಯಗಾರರು ದಲಿರು, ಹೊಲೆ ಮಾದಿಗರು ಇವರನ್ನು ಕಟ್ಟಿಕೊಂಡು ವ್ಯವಸ್ಥೆಯ ವಿರುದ್ಧವಾಗಿ ಮಹಾಮನೆಯನ್ನು ಕಟ್ಟಿಕೊಂಡು ರಾಜನಿಗೆ ಎದುರಾಳಿಯಾಗಿ ನಿಂತಿರುವುದರ ಬಗೆಗೆ ಅಸಮಧಾನವಿದೆ. ಅವರನ್ನೆಲ್ಲ ಕಟ್ಟಿಕೊಂಡು ಸಮ್ರಾಜ್ಯ ನಿರ್ಮಾಣ ಸಾಧ್ಯವಿಲ್ಲ. ಒಂದು ಸಾಮ್ರಾಜ್ಯವೆಂದರೆ ಹೊಲಗೇರಿ, ಹೊರಕೇರಿ, ಭಿಕಾರಿಗಳ ಕೇರಿ– ಇವಿಷ್ಟೇ ಕೇರಿಗಳಲ್ಲದೆ ಅಗ್ರಹಾರಗಳು, ಊರುಗಳು, ರಾಜಧಾನಿಗಳು ಇರುವುದೆಂಬುದನ್ನು ಹೇಳುವ ಬಿಜ್ಜಳ ಸ್ವತಃ ತನ್ನ ಆಡಳಿತದ ಕ್ರಮವನ್ನು ಒಮ್ಮೆ ಪರಿಶೀಲಿಸಿಕೊಳ್ಳ ಬೇಕಾಗುತ್ತದೆ. ಏಕೆಂದರೆ ಬಸವಣ್ಣ ಮಹಾಮನೆಯನ್ನು ಕಟ್ಟಿದ್ದು ಬಿಜ್ಜಳ ನಿರ್ಲಕ್ಷ್ಯ ತೋರಿದವರಿಗೆ ಸಮಾನ ಸ್ಥಾನಮಾನವನ್ನು ನೀಡ ಬೇಕೆಂಬ ಕಾರಣಕ್ಕೆ. ಮಹಾಮನೆಯ ಬಗೆಗೆ ಹೀಗೆ ತಪ್ಪು ಗ್ರಹಿಕೆಯನ್ನು ಹೊಂದಿರುವ ಬಿಜ್ಜಳನಿಗೆ ಸಾವಂತ್ರಿ ಅಲ್ಲಿನ ಜನರೂ ಕಾಯಕ ಮಾಡಿ ಜೀವನ ನಡೆಸುತ್ತಿರುವುದಾಗಿಯೂ ಅದರಿಂದಲೇ ಬೊಕ್ಕಸದ ಆದಾಯ ಹೆಚ್ಚಾಗುತ್ತಿರುವುದಾಗಿಯೂ ಹೇಳುತ್ತಾಳೆ ಹಾಗೂ ಸಾವಿರಾರು ವರ್ಷಗಳಿಂದ ಅಸ್ಥಿತ್ವದಲ್ಲಿರುವ ಅರಮನೆಯ ಕಾನೂನುಗಳಿಂದ ಕಾಣದ ತಮ್ಮ ಅಸ್ಥಿತ್ವ, ನೆಮ್ಮದಿ, ಸಂತೋಷವನ್ನು ಶರಣರಾಗಿ ಮಹಾಮನೆಯ ಆವರಣದಲ್ಲಿ ಕಂಡಿದ್ದಾರೆ ಎಂಬ ಅರಿವನ್ನು ಮೂಡಿಸುವ ಪ್ರಯತ್ನ ಮಾಡುತ್ತಾಳಾದರೂ ಬಿಜ್ಜಳನಿಗೆ ಅದು ಉದ್ಧಟತನವಾಗಿ ಕಂಡು ಬರುತ್ತದೆ.

ಬಿಜ್ಜಳನಿಗೆ ತನ್ನ ಪ್ರಾಮುಖ್ಯತೆಯು ನಶಿಸುತ್ತಿರುವುದರ ಅರಿವಿದೆ ಹಾಗಾಗಿ ಬಸವಣ್ಣ ಸೃಷ್ಟಿಸಿದ ಮಹಾಮನೆಗೆ ಬಸವಣ್ಣನಂತೆ ಬಿಜ್ಜಳನಂತ ರಾಜನ ಅಗತ್ಯವನ್ನು ಮರೆತುದುದರ ಬಗೆಗೆ ವಿಷಾದವನ್ನು ವ್ಯಕ್ತಪಡಿಸುತ್ತಾನೆ. ಆಗ ಬಸವಣ್ಣ ಮಹಾಮನೆಯ ನಿರ್ಮಾಣದ ಅನಿವಾರ್ಯತೆಯನ್ನು ಬಿಜ್ಜಳನಿಗೆ ತಿಳಿಸುತ್ತಾನೆ. "ತಾವಿರುವ ಕಲ್ಯಾಣವನ್ನೇ ಕೂಡಲ ಸಂಗಮವಾಗಿಸಲು....ವ್ಯವಸ್ಥೆಯ ನಿಂತ ನೀರಿಗೇ ಹರಿವು ನೀಡಿ, ಹೊಸದರೊಂದಿಗೆ ಸೇರಿಸಿ ಶಿವಪುರವೆಂಬ ಕೂಡಲ ಸಂಗಮವನ್ನ ರೂಪಿಸಬೇಕೆಂದು ನನ್ನ ಕನಸಾಗಿತ್ತು....."

ಹೀಗೆ ಅರಮನೆ ಮತ್ತು ಮಹಾ ಮನೆಯ ನಡುವಿನ ಸಂಘರ್ಷ ನಾಟಕದಲ್ಲಿ ತರೆದುಕೊಳ್ಳುತ್ತಾ ಸಾಗುತ್ತದೆ. ಕಲ್ಯಾಣವನ್ನು ಕೂಡಲಸಂಗಮವಾಗಿಸಲು ಹೊರಡುವ ಬಸವಣ್ಣನಿಗೆ ಎದುರಾಗುವುದು ಅಲ್ಲಿನ ಪುರೋಹಿತಶಾಹಿ ಹಾಗೂ ಪ್ರಭುತ್ವ. ಅವು ಪರಂಪರಾಗತ ಸಂಪ್ರದಾಯವನ್ನು ಪೋಷಿಸುತ್ತಲೇ ಬರುವುದರಿಂದ, ಹಿಂದಿನ ಗೊಡ್ಡು ಆಚರಣೆಗಳ ನಡುವೆಯೇ ಬದುಕಬೇಕೆಂಬ ಉದ್ದೇಶವಿದ್ದರಿಮದ ಬಸವಣ್ಣ ಅನಿವಾರ್ಯವಾಗಿ ತಾನು ಮಹಾಮನೆಯನ್ನು ರಚಿಸಿ ಅಲ್ಲಿ ತಲೆತಲಾಂತರದಿಂದಲೂ ತುಳಿತಕ್ಕೊಳಗಾದವರಿಗೆ ಆಶ್ರಯವನ್ನು ನೀಡುತ್ತಾನಾದರೂ ಸನಾತನಿಗಳ ಹಾಗೂ ಪ್ರಭುತ್ವದ ಕ್ರೋಧವನ್ನು ಎದುರಿಸಬೇಕಾಗುತ್ತದೆ.

**ಪ್ರಭುತ್ವ ಮತ್ತು ಧರ್ಮ ಸಾಮಾನ್ಯರ ಮೇಲೆ ಮಾಡುವ ಆಕ್ರಮಣ:**

ಪ್ರಭುತ್ವ ಮತ್ತು ಧರ್ಮ ಯಾವುದೇ ಸಮಾಜವನ್ನು ಗಾಢವಾಗಿ ಪ್ರಭಾವಿಸುವ ಅತ್ಯಂತ ಪ್ರಬಲ ಶಕ್ತಿಗಳು. 12ನೇ ಶತಮಾನದಲ್ಲಿದ್ದ ಈ ಎರಡು ಶಕ್ತಿಗಳನ್ನು ಕಂಬಾರರು ತಮ್ಮ ನಾಟಕದಲ್ಲಿ ಪುನರ್

ರಚಿಸುವುದರ ಮೂಲಕ ಸಮಕಾಲೀನ ಸಮಾಜ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಾರೆ.

ನಾಟಕದಲ್ಲಿ ಪ್ರಭುತ್ವ ಮತ್ತು ರಾಜಕಾರಣ ಭ್ರಷ್ಟಗೊಂಡಿರುವುದರ ಸೂಚನೆ ಇದೆ. ಶಿವರಾತ್ರಿಯ ಪುಣ್ಯದಿನದಂದು ಕಲ್ಯಾಣಿಯಲ್ಲಿ ಎಲ್ಲರೂ ಜಾಗರಣೆ ಮಾಡುತ್ತಿದ್ದಾರೆ. "ಶಿವರಾತ್ರಿ, ಎಂಬುದು ಘೋರ ವ್ಯಂಗ್ಯವನ್ನು ಧ್ವನಿಸುತ್ತದೆ. ಪುರಾಣಗಳ ಪ್ರಕಾರ ಮಾಘ ಕೃಷ್ಣ ಪಕ್ಷದ ಚತುರ್ದಶಿಯಂದು ಆಚರಿಸಲ್ಪಡುವ ಮಹಾಶಿವರಾತ್ರಿ 'ಅಹಿಂಸೆ, ಸತ್ಯ, ದಯೆ, ಕ್ಷಮೆ' ಇತ್ಯಾದಿ ಜೀವದಾಯಕ ಮೌಲ್ಯವನ್ನು ಸಂಕೇತಿಸುತ್ತದೆ. ಆದರೆ ನಾಟಕ ದರ್ಶಿಸುವುದು ಶಿವರಾತ್ರಿಯಂದು ಕ್ರೂರ ವ್ಯವಸ್ಥೆ ನಡೆಸುವ ಕ್ರೌರ್ಯ."[3] ಶಿವರಾತ್ರಿಯ ಈ ಜಾಗರಣೆ ಧಾರ್ಮಿಕವಾದುದಲ್ಲ, ಶಿವನ ಮೇಲಿನ ಭಕ್ತಿಯಿಂದ ಮಾಡುತ್ತಿರುವುದಲ್ಲ. ಬದಲಿಗೆ ಎಲ್ಲರಲ್ಲೂ ಜೀವ ಭಯ ಆವರಿಸಿದೆ. ಹಿಂದಿನ ದಿನ ಹರಳಯ್ಯ ಮತ್ತು ಮಧುವರಸರನ್ನು ಎಳೆಹೋಟೆ ಎಳೆಸಿ ಕೊಲ್ಲಿಸಿದ ನಂತರ ಅರಮನೆಯ ಭಟರು ಮುಗ್ಧರನ್ನೂ, ಸಾಮಾನ್ಯರನ್ನೂ ಭೇಟೆಯಾಡುತ್ತಿದ್ದಾರೆ. ಇದಕ್ಕೆ ಪ್ರಭುತ್ವದ ಬೆಂಬಲವಿದೆ. "ಆ ರಾತ್ರಿ ಕಲ್ಯಾಣ ಮಲಗಿರದೇ ಇರುವುದು ಶಿವಭಕ್ತಿಯ ಜಾಗರಣೆಯ ಆಧ್ಯಾತ್ಮಿಕ ಭಕ್ತಿಯಿಂದಲ್ಲ, ಬದಲಾಗಿ ಲೌಕಿಕ ಭಯದಿಂದ. ರಾಜಪ್ರಭುತ್ವದ ತಲ್ಲಣಗಳಿಂದ. ಇವೆಲ್ಲವನ್ನು ಶಿವರಾತ್ರಿಯ ಒಂದು ಬಿಂದುವಿಗೆ ತಂದು ರಾತ್ರಿಯ ನಿಶ್ಚಿತ ಕಾಲದಲ್ಲಿ ಅರಿವಿನ ಆವಾಹನೆ ಹಾಗೂ ನಾಟಕದ ಶೃಂಗದಲ್ಲೊಂದು ವಿರೇಚನೆಗೆ ಕಂಬಾರರು ಪ್ರಯತ್ನಿಸುತ್ತಾರೆ. ಆದ್ದರಿಂದಲೇ, ಗ್ರಾಮದೇವತೆ ಹುಚ್ಚಿ "ವಿಸರ್ಜನೆಗೊಂದು ಕ್ರಮ ಬೇಡವೇ?" ಎಂದು ಕೇಳುತ್ತಾಳೆ. ಕನಿಷ್ಟ ಬಿಲ್ವ ಪತ್ರೆಯ ಎಲೆಯನ್ನಾದರೂ ಮುಗ್ಧ ಸಂಗಯ್ಯನ ಪಾದದ ಮೇಲಿಡಿ ಎಂದು ಹೇಳುತ್ತಾಳೆ. ಆದರೆ ಶಿವರಾತ್ರಿ ನಾಟಕ ಬಿಜ್ಜಳ–ಬಸವಣ್ಣನ ಈ ಸಂದರ್ಭ ವಿಸರ್ಜನೆ ಆದಷ್ಟೂ ಮತ್ತೆ ಆವಾಹನೆಗೊಂಡು ಶಿವರಾತ್ರಿಯ ಕತ್ತಲಿನಿಂದ ಹುಟ್ಟುವ ಬೆಳಕು ಎಂದು ತನ್ನ ನಾಟಕ ರಚನೆಯ ಸೃಷ್ಟಿಯಿಂದಲೇ ಮತ್ತೆ ಸಾರುತ್ತದೆ."[4] ರಾಜಕಾರಣ ಭ್ರಷ್ಟಗೊಂಡಿರುವುದನ್ನ ಬಿಜ್ಜಳನ ವರ್ತನೆಯು ನೀಡುತ್ತದೆ. ಭಯದಿಂದ ಇಡೀ ನಗರ ತತ್ತರಿಸುತ್ತಿರುವಾಗ ಬಿಜ್ಜಳ ವೇಷಾಂತರದಿಂದ ಸೂಳೆ ಮನೆಯನ್ನು ಪ್ರವೇಶಿಸುತ್ತಾನೆ. ರಾಜನಾದ ಬಿಜ್ಜಳನಿಗೆ ತನ್ನ ಪ್ರಜೆಗಳ ಯೋಗಕ್ಷೇಮಕ್ಕಿಂತ, ಅವರ ದುಃಖದ ಕಾರಣಗಳನ್ನು ಹುಡುಕುವುದಕ್ಕಿಂತ ತನ್ನ ಸಂತೋಷವೇ ಮುಖ್ಯವಾದುದನ್ನು ಕಾಣುತ್ತೇವೆ. "ವೇಷಾಂತರ ಕಂಬಾರರ ನಾಟಕಗಳಲ್ಲಿ ಒಂದು ಪ್ರಧಾನ ರೂಪಕ. 'ಹೇಳತೇನ ಕೇಳ'ದಲ್ಲಿ ರಾಕ್ಷಸ ಗೌಡನ ವೇಷ ಧರಿಸಿ ಶಿವಾಪುರ ಪ್ರವೇಶಿಸಿವುದು: ಪಾಶ್ಚಾತ್ಯ ಸಂಸ್ಕೃತಿ ಉದ್ಧಾರಕನ ವೇಷ ಧರಿಸಿ ಈ ಹೊತ್ತು ನಮ್ಮ ಬದುಕನ್ನು ಅಸಹನೀಯಗೊಳಿಸುತ್ತಿರುವುದು– ಈ ಎಲ್ಲ ಬಗೆಯ ದುರಂತವೂ ಕಂಬಾರರಲ್ಲಿ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ನಮ್ಮ ಕಾಲದ ತಲ್ಲಣಗಳನ್ನು ಕಂಬಾರರ ಹಾಗೆ ಹಿಡಿದಿಟ್ಟ ಲೇಖಕರು ಅತ್ಯಂತ ವಿರಳ."[5] ಈ ವೇಷಾಂತರಗಳಿಗೆ ಮಾರುಹೋಗುವವರು ಪ್ರಭುತ್ವ ಮತ್ತು ಆತನ ಸುತ್ತಲಿರುವ ಮೇಲ್ವರ್ಗದ ಬ್ರಾಹ್ಮಣರೇ ಆಗಿರುವುದನ್ನು ನಾಟಕದಲ್ಲಿ ಕಾಣುತ್ತೇವೆ. ತನ್ನ ಸುಖ ಸಂತೋಷಗಳಿಗಾಗಿ ಬಿಜ್ಜಳ ವೇಷವನ್ನು ಧರಿಸಿದರೆ, ಹರಿಹರ ಪಂಡಿತ ಮತ್ತು ಆತನ ಮಗ ದಾಮೋದರ ಶರಣರ ವೇಷಧರಿಸಿ ಅರಮನೆಯಲ್ಲಿ ಲಕ್ಷಾಂತರ ಬೆಲೆ ಬಾಳುವ ಚಂದ್ರಸರವನ್ನು ಕಳುವು ಮಾಡಲು ವೇಷ ಧರಿಸುತಾರೆ. ಇಲ್ಲಿ ಶರಣರ ವೇಷದಲ್ಲಿ ಅರಮನೆ ಮೇಲ್ವರ್ಗದವರಿಂದಲೇ ಲೂಟಿಯಾಗುತ್ತಿದ್ದುದರ ಸೂಚನೆಯಿದೆ. ತಾವು ಮಾಡಿದ ಕೃತ್ಯಗಳನ್ನು ಸುಲಭವಾಗಿ ಶರಣರ ಮೇಲೆ ಹೊರಿಸಿ ಅವರನ್ನು ಶಿಕ್ಷಿಸುತ್ತಿದ್ದ ಸನಾತನಿಗಳ ಸ್ವಭಾವದ ಅರಿವಾಗುತ್ತದೆ. ಪಂಡಿತರಿಂದ ನಡೆಯುವ ಕಳ್ಳತನದಂತಹ ಕೃತ್ಯ ಧರ್ಮಭ್ರಷ್ಟತೆಯ ಪ್ರತೀಕವೇ ಆಗಿದೆ.

ಪ್ರಭುತ್ವದ ವಿಫಲತೆಗೆ ರಾಜನ ಅಸಮರ್ಥತೆಯೇ ಕಾರಣವೆಂಬುದನ್ನು ಬಹಳ ಸೂಕ್ಷ್ಮವಾಗಿ ಹಾಗೂ ಜಾಣ್ಮೆಯಿಂದ ಸಾವಂತ್ರಿ ಪವಾಡದ ರೂಪದಲ್ಲಿ ಹೇಳುತ್ತಾಳೆ. ಈ ಪ್ರಸಂಗ ಪ್ರಭುತ್ವ ಮತ್ತು ಧರ್ಮ ಒಂದಾಗಿ ಜನತೆಯ ಮೇಲೆ ಮಾಡುವ ಆಕ್ರಮಣವನ್ನು, ಸಾಮಾನ್ಯ ಜನರಿಗೆ ಇದರ ಅರಿವು ಇರುವುದನ್ನು ಪರಿಣಾಮಕಾರಿಯಾಗಿ ನಮ್ಮ ಅನುಭವಕ್ಕೆ ತರುತ್ತದೆ. ಆದರೆ ಬಿಜ್ಜಳ ಸಾವಂತ್ರಿಯ ಮಾತುಗಳನ್ನು ಒಪ್ಪದೆ ತಳ್ಳಿ ಹಾಕುತ್ತಾನಾದರೂ ತನ್ನ ಸಾವಿನ ಕೊನೆ ಗಳಿಗೆಯಲ್ಲಿ ಅದನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಡುತ್ತಾನೆ. "ಮುಟ್ಟಲಾಗದ ನನ್ನ ಎದೆಯ ಮೂಲೆಗಳನ್ನ ಮುಟ್ಟಿದವ, ತಟ್ಟಿದವ ನೀನೊಬ್ಬನೇ ಬಸವಣ್ಣಾ! ನಿನ್ನ ವಚನಗಳಿಗೆ ಆ ಶಕ್ತಿಯಿತ್ತು. ನಿಜ. ಆದರೆ ಚಾಡಿಗೆ ನಿನ್ನ ಮಾತಿಗಿಂತ ಹೆಚ್ಚಿನ ಶಕ್ತಿ ವ್ಯಾಪ್ತಿ, ವೇಗವಿತ್ತು ಬಸವಣ್ಣಾ! ಚಾಡಿಗಳ ಸಡಗರದಲ್ಲಿ ತಲೆ ಎತ್ತಿ ನಿನ್ನನ್ನು ಕಾಣದೆ, ಕಾಲ ನೆಲ ಕಾಣದೆಯೆ ಎಡವಿದೆನು ಬಸವಣ್ಣ! ಎಂದು ರೋದಿಸುತ್ತಾನೆ.

ಬಸವಣ್ಣನಿಗೆ ಬಿಜ್ಜಳ ಅವಕಾಶವಾದಿ ಎಂಬುದರ ಅರಿವಿದೆ. ರಾಜನ ಮಾತುಗಳಲ್ಲಿ ಹೆಚ್ಚು ನಾಟಕವೇ ಎಂಬುದನ್ನು ನಿರ್ಭಯನಾಗಿ ಹೇಳುತ್ತಾನೆ. ರಾಜನ ಆಶ್ರಯಕ್ಕಾಗಿ ತಾನು ಸುಳ್ಳನ್ನು ಹೇಳುವುದಿಲ್ಲ ಎನ್ನುವ ಬಸವಣ್ಣ ತಾನು ಹತ್ತಿರದಿಂದ ಕಂಡ ವ್ಯವಸ್ಥೆಯ ದುರಾಡಳಿತವನ್ನು ನೇರವಾಗಿ ಖಂಡಿಸುತ್ತಾನೆ. ಸಾವಿರಾರು ವರ್ಷಗಳಿಂದ ವ್ಯವಸ್ಥೆಯ ಹೆಸರಿನಲ್ಲಿ ಮುಗ್ಧರು ಬಲಿಪಶುಗಳಾಗುತ್ತಿದ್ದು ಅವರು ಮುಕ್ತವಾಗಿ ಉಸಿರಾಡಲೆಂದೇ ಮಹಾಮನೆ ರಚನೆಗೊಂಡುದಾಗಿ ಹೇಳುವ ಬಸವಣ್ಣ, ವರ್ಣಸಂಕರ ವಿವಾಹವೆಂದು ಹರಳಯ್ಯ ಮಧುರಸರನ್ನು ಹೀನಾಯವಾಗಿ ಕೊಲ್ಲಿಸಿದ ವ್ಯವಸ್ಥೆಯ ಕ್ರೌರ್ಯವನ್ನು ಜರಿಯುತ್ತಾನೆ. ಅರಮನೆಯು ಸನಾತನಿಗಳ ಬೀಡಾಗಿದ್ದು ಅಲ್ಲಿ ಸಾಮಾನ್ಯಜನರನ್ನು ಕೀಳಾಗಿ ಕಾಣಲಾಗುತ್ತಿದೆ. ಧರ್ಮ ಮೇಲ್ವರ್ಗದವರ ಸ್ವತ್ತಾಗಿ ಬಡ ಜನಗಳನ್ನು ತುಚ್ಚವಾಗಿ ನಡೆಸಿಕೊಳ್ಳುತ್ತಿದೆ. ಮಹಾಮನೆಯಲ್ಲಿ ಸಾಮಾನ್ಯ ಜನ ತಮ್ಮ ದೇವರನ್ನು ಕಂಡುಕೊಂಡು ನೆಮ್ಮದಿಯಾಗಿದ್ದಾರೆ ಎಂದು ಹೇಳುವ ಬಸವಣ್ಣನಿಗೆ ಪ್ರಭುತ್ವ ಮತ್ತು ಧರ್ಮದ ರಾಜಕಾರಣದಲ್ಲಿ ಕುಸಿದಿರುವ ಸಾಮಾನ್ಯ ಜನರ ಕಾಳಜಿಯಿರುವುದು ಗೋಚರಿಸುತ್ತದೆ.

ಇಲ್ಲಿ ಶರಣರು ಸನಾತನ ಧರ್ಮದ ಕಟ್ಟುಗಳಿಂದ ಹೊರಬಂದು ತಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುವಂತಹ ಧರ್ಮದ ನೆರಳಿನಲ್ಲಿ ಕಾಯಕವನ್ನು ಮಾಡುತ್ತಾ ಜೀವಿಸುತ್ತಿರುವುದನ್ನು ಕಾಣುತ್ತೇವೆ. ಅವರ ಈ ಧರ್ಮದಲ್ಲಿ ಸನಾತನ ಧರ್ಮದ ನೆರಳು ಇಲ್ಲದೆ ಸಮಾನತೆಯಿಂದ ಬದುಕನ್ನು ಕಟ್ಟಿಕೊಂಡು ಜೀವಿಸುವ ಕಾಯಕ ಜೀವಿಗಳಾಗಿರುವುದನ್ನು ಕಾಣುತ್ತೇವೆ.

ನಾಟಕದ ಬಹು ಮುಖ್ಯವಾದ ಸನ್ನಿವೇಶ ದಾಮೋದರ ಮತ್ತು ಬಿಜ್ಜಳನ ಸಂಭಾಷಣೆಯ ಭಾಗ. ನಾಟಕದಲ್ಲಿ ಬ್ರಾಹ್ಮಣನಾದ ದಾಮೋದರ ತನ್ನ ಸನಾತನ ಧರ್ಮದ ಬೇರುಗಳನ್ನು ಕಳಚಿ ಕಳ್ಳ ಚಿಕ್ಕಯ್ಯನ ಮಾರ್ಗದರ್ಶನದಲ್ಲಿ ಶರಣನಾಗಿ ಬದಲಾವಣೆ ಹೊಂದುತ್ತಾನೆ. ದಾಮೋದರ ಬಿಜ್ಜಳನ ಆಳ್ವಿಕೆಯ ವಿಫಲತೆಯ ಕಾರಣಗಳನ್ನು ಎಳೆಯೆಳೆಯಾಗಿ ತೋರುವ ಪ್ರಯತ್ನವನ್ನು ಮಾಡುತ್ತಾನೆ. ಕಾಯಕ ಜೀವನಕ್ಕೆ ಬೆಲೆಕೊಡುವ ಶರಣರು, ಚಂದ್ರಹಾರವನ್ನು ನಿರಾಕರಿಸುವ ಶರಣರು ತಮಗಿಂತಲೂ ಭಿನ್ನವಾದ ಲೋಕದಲ್ಲಿರುವುದನ್ನು ತಿಳಿಸುತ್ತಾನೆ. ವ್ಯವಸ್ಥೆಯಲ್ಲಿ ಕಟ್ಟುನಿಟ್ಟಿಲ್ಲದೆ ಅಧಿಕಾರಕ್ಕಾಗಿ ಹಂಬಲಿಸುತ್ತಿರುವ ರಾಜನ ಬಗೆಗೆ ಆತನಿಗೆ ಕನಿಕರವಿದೆ. ರಾಜನ ಅರಮನೆಯ ಮುಂದೆ ಮಹಾಮನೆ ಅವನಿಗೆ ಮಾನವನ ಜೀವನವನ್ನು ಬದಲಾವಣೆಗೆ ಒಳಪಡಿಸುವ

ಪ್ರಯೋಗ ಶಾಲೆಯಂತೆ ಕಾಣುತ್ತದೆ. ಅಲ್ಲಿ ಸಾಮಾನ್ಯರಾದ ಸಾವಂತ್ರಿ, ಮತ್ತು ಚಿಕ್ಕಯ್ಯನಂತವರೂ ಮಹತ್ವವನ್ನು ಪಡೆಯುತ್ತಾರೆ. ಅರಮನೆಯಲ್ಲಿ ಸೂಳೆಯಾದ ಸಾವಂತ್ರಿ ಮಹಾಮನೆಯಲ್ಲಿ ಶಿವಶರಣೆ, ಬಸವಣ್ಣನ ತಾಯಿಯಾಗುತ್ತಾಳೆ ಎಂದರೆ ವ್ಯವಸ್ಥೆ ಅವಳಿಗೆ ನೀಡದ ಗೌರವವನ್ನು ಆಕೆ ಪಡೆಯುವುದು ಮಹಾಮನೆಯಲ್ಲಿ ಎಂಬ ಸತ್ಯವನ್ನು ತಿಳಿಸುತ್ತಾನೆ. "ದಲಿತರು ಮತ್ತು ಬಡವರಿಗೆ ಸೌಲಭ್ಯಗಳನ್ನು ಕಲ್ಪಸಿದಾಗ–ಮುಖ್ಯವಾಗಿ ಅವರ ಆತ್ಮಗೌರವಗಳನ್ನು ಮನ್ನಿಸಿದಾಗ ಅದೇ ಜನಗಳಲ್ಲಿ ತಾವೂ ಜನಪ್ರಿಯರಾಗಿದ್ದಿರಿ ಪ್ರಭು. ಹಾಗೇ ಮುಂದುವರೆದಿದ್ದರೆ ಕಲ್ಯಾಣವನ್ನು ಅಮರಾವತಿಯನ್ನಾಗಿ ಮಾಡುವುದು ಸಾಧ್ಯವಿತ್ತು....ಈಗ ಹ್ಯಾಗೆ ಕಾಣುವಿರಿ ಗೊತ್ತ ಪ್ರಭು? ............ ತರುಣ ಬಿಜ್ಜಳನ ಭೂತದಂತೆ!" ಎಂದು ಬಿಜ್ಜಳನ ಅಸಮರ್ಥ ರಾಜಕಾರಣದ ಪ್ರತಿಫಲವೇ ಇಂದು ಎಲ್ಲವನ್ನೂ ಕಳೆದುಕೊಂಡು ಅನಾಥನಂತೆ ನಿಂತಿರುವ ಬಿಜ್ಜಳನ ನಿಜ ಸ್ವರೂಪ ಎಂದು ತಿಳಿಸುವ ದಾಮೋದರನೂ ವ್ಯವಸ್ಥೆಯ ಕ್ರೌರ್ಯಕ್ಕೆ ಬಲಿಯಾಗುತ್ತಾನೆ.

ನಾಟಕದ ಕೊನೆಯಲ್ಲಿ ಬಿಜ್ಜಳ ಎಲ್ಲವನ್ನು ಕಳೆದು ಕೊಂಡು ಏಕಾಂಗಿಯಾಗಿ ನಿಲ್ಲುತ್ತಾನೆ. "ಮತ್ತೆ ನೋಯಿಸಲಾರೆ ನಿನ್ನ. ವ್ಯವಸ್ಥೆಗೆ ಹೃದಯವಿಲ್ಲ, ಸಂಗಯ್ಯನಿಗೆ ಕರುಣೆಯಿಲ್ಲ ಬಸವಣ್ಣಾ, ಎರಡು ತಿರಸ್ಕಾರಗಳ ನಡುವೆ ನಿಂತಿದ್ದೇನೆ." ಎಂಬ ಬಿಜ್ಜಳನ ಮಾತುಗಳಲ್ಲಿ ಇಲ್ಲಿಯವರೆಗೂ ತಾನು ಮಾಡಿದ ಎಲ್ಲ ಕೃತ್ಯಗಳ ಬಗೆಗೆ ಅರಿವಿರುವ ಬಿಜ್ಜಳನ ಪ್ರಭುತ್ವದ ಮದ ಆತನಿಂದ ಎಲ್ಲಾ ಕೃತ್ಯಗಳನ್ನು ಮಾಡಿಸಿದೆ ಎಂಬುದನ್ನು ಸೂಚಿಸುತ್ತದೆ. ತನ್ನೆಲ್ಲಾ ತಪ್ಪುಗಳಿಗೂ ತನ್ನ ಅಂತ್ಯದ ಸಮಯದಲ್ಲಿ ಕ್ಷಮೆಯನ್ನು ಕೋರಿ ಜಗದೇವ ಮತ್ತು ಮಲ್ಲಿ ಬೊಮ್ಮಣ್ಣರಿಂದ ಹತನಾಗುತ್ತಾನೆ.

**ಅಡಿಟಿಪ್ಪಣಿ**


1. ಕಂಬಾರರ ಸಾಹಿತ್ಯದ ನೆಲೆಬೆಲೆ, ಸಂಪಾಕರು–ಬಸವರಾಜಕಲ್ಗುಡಿ, ಅಂಕಿತ ಪುಸ್ತಕ, ಬೆಂಗಳೂರು, 2012, ಪು–229.
2. ಅದೇ, ಪು–228.
3. ಶಿವರಾತ್ರಿ ನಾಟಕದ ಮುನ್ನುಡಿ, ಸಿ.ಎನ್.ರಾಮಚಂದ್ರನ್.
4. ಕಂಬಾರರ ಸಾಹಿತ್ಯದ ನೆಲೆಬೆಲೆ, ಸಂಪಾಕರು–ಬಸವರಾಜಕಲ್ಗುಡಿ, ಅಂಕಿತ ಪುಸ್ತಕ, ಬೆಂಗಳೂರು, 2012, ಪು–211.
5. ಅದೇ, ಪು–230.